ಬಂದಿದೆಯೇ ಸೆಂಟ್ರಲ್ ಪರ್ಮಿಟ್ ಅಥವಾ ರಾಜ್ಯ ಪರ್ಮಿಟ್ ಯಾವ ಪರ್ಮಿಟ್ ತೆಗೆದುಕೊಂಡು ಓಡಿಸುತ್ತಿದ್ದಾರೆಂಬುದನ್ನು ಖಚಿತಪಡಿಸಿಕೊಂಡು, ಪರ್ಮಿಟ್ ಇಲ್ಲದೇ ಓಡಾಡುತ್ತಿರುವ ವಾಹನಗಳನ್ನು ನಿಲ್ಲಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಭೈರಪ್ಪಾಜಿಯವರ ಪ್ರಶ್ನೆ ಕೂಡ ಆದೇರೀತಿ ಇದೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಆ ರೀತಿ ಓಡಾಡುವ ಬಸ್ಸುಗಳನ್ನು ತಡೆಯಲು ಸೂಕ್ತವಾದ ಕ್ರಮ ಇಲ್ಲದೇ ಇರುವುದರಿಂದ, ಕಾನೂನಿನಲ್ಲಿ ಅಡೆತಡೆ ಇರುವುದರಿಂದ ಹೀಗೆ ಆಗಿದೆ, ಆಲ್ ಇಂಡಿಯಾ ಪರ್ಮಿಟ್ ಕೊಡುವಾಗ ಏನೇನು ನಿಯಮಗಳನ್ನು ಮಾಡಬೇಕೆಂದು ಮತ್ತು ಕಾನೂನನ್ನು ಯಾವ ರೀತಿ ತಿದ್ದುಪಡಿ ಮಾಡಬೇಕೆಂದು ಸೂಚನೆಯನ್ನು ಕಳುಹಿಸಿದ್ದೇವೆ. ಅದು ಒಪ್ಪಿಗೆಯಾಗಿ ಬಂದ ತಕ್ಷಣ ಸರಿಯಾದ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ತಾವು ಪರ್ಮಿಷನ್ ಕೊಡುವಾಗ ಯಾವ್ಯಾವ ಕರಾರುಗಳನ್ನು ನಿಗದಿ ಮಾಡುತ್ತೀರಿ ? ೧೩೧ ವಾಹನಗಳಲ್ಲಿ ೧೧೭ ವಾಹನಗಳು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸಂಬಂಧಪಟ್ಟವೆ ಎಂದು ಹೇಳಿದ್ದೀರಿ. ಉಳಿದ ೧೪ ವಾಹನಗಳಲ್ಲಿ ಕೇಂದ್ರ ಮತ್ತು ರಾಜ್ಯ ಪ್ರವಾಸೋದ್ಯಮಗಳಿಗೆ ಎಷ್ಟೆಷ್ಟು ಬರುತ್ತವೆಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಈ ಪ್ರಶ್ನೆಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ೧೨ ವಾಹನಗಳನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮದವರು; ೨ ವಾಹನಗಳನ್ನು ಅಖಿಲ ಭಾರತ ಪ್ರವಾಸೋದ್ಯಮ ನಿಗಮದವರು ತೆಗೆದುಕೊಂಡಿದ್ದಾರೆ, ೧೦೦ ವಾಹನಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಿಗಮದವರಿಗೆ ಬಂದಿದೆ, ಇನ್ನು ೧೭ ವಾಹನಗಳನ್ನು ಅಂತರರಾಜ್ಯ ರಸ್ತೆ ಪ್ರವಾಸೋದ್ಯಮ ನಿಗಮದವರು ಓಡಿಸುತ್ತಿದ್ದಾರೆ.

ಶ್ರೀ ಬಿ. ಭೈರಪ್ಪಾಜಿ —ಮಾನ್ಯ ಅಧ್ಯಕ್ಷರೇ, ಪರ್ಮಿಟ್ ಇಲ್ಲದೆ ಕೆಲವರು ಖಾಸಗಿ ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರ ಕಳಕಳಿ ಸರ್ಕಾರದ ಗಮನಕ್ಕೆ ಬಂದಿದೆ. ಇದರ ಬಗ್ಗೆ ತಿದ್ದುಪಡಿ ಮಾಡಬೇಕಾದರೆ ಸ್ವಲ್ಪ ಕಾನೂನಿನ ಅಡಚಣೆ ಇದೆ.

ಶ್ರೀ ಬಿ. ಭೈರಪ್ಪಾಜಿ.—ಸ್ವಾಮಿ ಖಾಸಗಿ ಬಸ್ಸುಗಳವರಂತೆ ಸರ್ಕಾರಿ ಬಸ್ಸುಗಳನ್ನು ಸಹ ಬೆಂಗಳೂರಿನಿಂದ ಶಿವಮೊಗ್ಗದವರೆಗೆ ಅಲ್ಲಲ್ಲಿ ನಿಲ್ಲಿಸಿಕೊಂಡು ಹೋಗುತ್ತಾರೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರ ಕಳಕಳಿಯನ್ನು ಪರಿಶೀಲಿಸುತ್ತೇನೆ.

ಗೋಕಾಕ್ ಕ್ಷೇತ್ರದಲ್ಲಿ ಜನತ ಗೃಹ ನಿರ್ಮಾಣದ ಬಗ್ಗೆ.

೬೦ ಶ್ರೀ ಎಂ. ಎಲ್. ಮಂತ್ರಣ್ಣನವರು (ಗೋಕಾಕ್) —ಮಾನ್ಯ ಕಾನೂನು ಸಂಸತ್ ವ್ಯವಹಾರಗಳು ಮತ್ತು ವಸತಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ?

ಅ) ಸರಕಾರದವರು ಗ್ರಾಮೀಣ ವಸತಿ ಯೋಜನೆಗಾಗಿ ಜನತಾ ಗೃಹ ನಿರ್ಮಾಣಕ್ಕಾಗಿ ಗೋಕಾಕ್ ಮತಕ್ಷೇತ್ರದಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ.

ಆ) ಎಷ್ಟು ಮನೆಗಳು ಪೂರ್ಣ ವಾಸಕ್ಕೆ ಯೋಗ್ಯವಾಗಿವೆ.

ಇ) ಈ ಬಗ್ಗೆ ವಾಸಕ್ಕೆ ಅನರ್ಹವುಳ್ಳ ಮತ್ತು ಹಾಳಾದ ಮನೆಗಳ ಬಗ್ಗೆ ಏನು ಕ್ರಮ ಕೈಕೊಳ್ಳಲಾಗಿದೆ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ ಮತ್ತು ವಸತಿ ಮಂತ್ರಿಗಳು).—ಅ) ೭೦೫ ಮನೆಗಳನ್ನು ಗೋಕಾಕ ಮತಕ್ಷೇತ್ರದಲ್ಲಿ ಗ್ರಾಮೀಣ ವಸತಿ ಯೋಜನೆ ಮತ್ತು ಜನತಾ ಗೃಹ ನಿರ್ಮಾಣದ ಅಡಿಯಲ್ಲಿ ನಿರ್ಮಿಸಲಾಗಿದೆ.

ಆ) ಟಿಲ್ ಮನೆಗಳು.

ಇ) ೧೬ ಮನೆಗಳು ಹಾಳಾಗಿದ್ದು ಸಂಬಂಧಪಟ್ಟ ಪ್ರಯೋಜನದಾರರಿಗೆ (Beneficiaries) ಅವನ್ನು ದುರಸ್ತಿಗೊಳಿಸುವಂತೆ ಕೇಳಿಕೊಳ್ಳಲಾಗಿದೆ. ಆದರೂ, ಮನೆಗಳು ಹಾಳಾದ ಕಾರಣದ ಬಗ್ಗೆ ಒಂದು ವಿವರವಾದ ವರದಿಯನ್ನು ತರಿಸಿಕೊಂಡು ಅವಶ್ಯವೆನಿಸಿದರೆ ಪ್ರಯೋಜನ ದಾರರಿಗೆ ಸಹಾಯ ಮಾಡಲು ಸೂಕ್ತ ಕ್ರಮಕ್ಕೆಗೊಳ್ಳಲಾಗುವುದು.

ಶ್ರೀ ಎಂ. ಎಲ್. ಮುತ್ತಣ್ಣವರ್.—ಮಾನ್ಯ ಅಧ್ಯಕ್ಷರೇ, ಈ ವ್ಯವಹಾರದಲ್ಲಿ ತಾಲ್ಲೂಕ್ ಬೋರ್ಡ್‌ನವರು ಅಕ್ರಮ ಕೆಲಸ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಈ ಪ್ರಶ್ನೆಗೆ ಮಾನ್ಯ ಸದಸ್ಯರು ನೋಟೀಸ್ ಕೊಟ್ಟರೆ ನಾನು ಮಾಹಿತಿಯನ್ನು ತರಿಸಿ ಉತ್ತರ ಹೇಳಬಹುದು.

ಶ್ರೀ ಎಂ. ಎಲ್. ಮುತ್ತಣ್ಣವರ್.—ಜನತಾ ಗೃಹ ನಿರ್ಮಾಣ ಯೋಜನೆಯಲ್ಲಿ ಮನೆಗಳನ್ನು ಕಟ್ಟಿಸುವುದಕ್ಕೆ ತಾಲ್ಲೂಕ್ ಬೋರ್ಡ್‌ನವರು ಟೆಂಡರ್ ಮೂಲಕ ಮನೆಗಳನ್ನು ಕಟ್ಟಿಸುತ್ತಾರೆ. ಇದರಲ್ಲಿ ಅಕ್ರಮ ನಡೆದಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ನಿರ್ದಿಷ್ಟವಾದ ಯಾವುದಾದರೂ ಪ್ರಕರಣಗಳಿದ್ದರೆ ಮಾನ್ಯ ಸದಸ್ಯರು ಆ ಪ್ರಕರಣದ ಎಲ್ಲಾ ಮಾಹಿತಿಯನ್ನು ನನಗೆ ಒದಗಿಸಿಕೊಟ್ಟರೆ ಆ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಎಂ. ಎಲ್. ಮುತ್ತಣ್ಣವರ್.—ಸ್ವಾಮಿ ಜನತಾ ಗೃಹ ನಿರ್ಮಾಣ ಕಾರ್ಯದಲ್ಲಿ ಸಾಕಷ್ಟು ದುರ್ವ್ಯವಹಾರ ನಡೆದಿದೆ. ಇದರ ಬಗ್ಗೆ ತನಿಖೆ ಮಾಡಿಸುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಇದನ್ನು ವಿಚಾರ ಮಾಡಿ ಸಂಬಂಧಪಟ್ಟ ನಿವರಗಳನ್ನು ತರಿಸಿ ಪರಿಶೀಲನೆ ಮಾಡೋಣ.

ಶ್ರೀ ಹೆಚ್. ಡಿ. ಚೌಡಯ್ಯ.—ಸ್ವಾಮಿ, ಈ ಹಿಂದಿನ ಸರ್ಕಾರದವರು ಒಂದು ಕಮಿಟಿಯನ್ನು ಮಾಡಿದ್ದೇವೆ ಎಂದು ಹೇಳಿದ್ದರು. ಆಗಿನ ಸರ್ಕಾರ ಈ ಯೋಜನೆಗೆ ಲಕ್ಷಾಂತರ ರೂಪಾಯಿಗಳನ್ನು ಬ್ಯಾಂಕ್‌ಗಳ ಮುಖಾಂತರವಾಗಿ ಒದಗಿಸಿತ್ತು. ಆದರೆ ಇನ್ನೂ ಪೂರ್ಣವಾಗದೆ ಇರತಕ್ಕಂತಹ ಮನೆಗಳಿಗೆ ಇನ್ನು ಉಳಿದಿರತಕ್ಕಂತಹ ೧೪ ದಿವಸಗಳಲ್ಲಿ ಹಣವನ್ನು ಬಿಡುಗಡೆ ಮಾಡುವ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.

ನಗರ ಸಾರಿಗೆ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ

೬೧ ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಸರಕಾರವು ಬೆಂಗಳೂರು ನಗರ ಸಾರಿಗೆ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ ಕೈಗೊಂಡ ಕ್ರಮ.

ಆ) ನಗರ ಸಾರಿಗೆ ವಿಭಾಗದ ಅಧ್ಯಕ್ಷತೆ ಕುರಿತು ನಡೆಸಿದ ಸಮೀಕ್ಷೆಯ ಬಗ್ಗೆ ಏನಾದರೂ ವರದಿ ಬಂದಿದೆಯೆ ?

ಇ) ಈ ಸಮೀಕ್ಷೆಗೆ ಖರ್ಚು ಮಾಡಲ್ಪಟ್ಟ ಮೊಬಲಗು ಎಷ್ಟು ?

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯಸಚಿವರು).—ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೆಳೆಯುತ್ತಿರುವ ನಗರ ಪ್ರಯಾಣಿಕರ ಅವಶ್ಯಕತೆಗೆ ಅನುಗುಣವಾಗಿ ಆಗಿಂದಾಗ್ಗೆ ಸಂಚಾರ ವ್ಯವಸ್ಥೆಯನ್ನು ವಿಸ್ತರಿಸಲಾಗುತ್ತಿದೆ.